ಶ್ರೀ ಡಿ. ದೇವರಾಜ ಅರಸ್.— ಇದು ಒಂದು ರೀತಿಯಲ್ಲಿ ಸರಿ ಇಲ್ಲ, ಒಂದು ರೀತಿಯಲ್ಲಿ ಸರಿ ಇದೆ. ದುಡ್ಡು ಬೇಕು ಎಂದರೆ ಅದನ್ನು ಮಾಡಬಹುದು ; ದುಡ್ಡು ಬೇಡ ಎಂದರೆ ಬೇಕಾದಾಗ ಅದನ್ನು ಉಪಯೋಗಿಸಿಕೊಳ್ಳೋಣ ಎಂದು ಬಿಡಬಹುದು.

ಶ್ರೀ ಗೋವಿಂದ. ಪಿ. ಒಡೆಯರಾಜ್.— ಸ್ವಾಮಿ, ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರು ವಿಫುಲವಾಗಿ ದೊರೆಯುತ್ತಿದೆ. ಅದನ್ನು ಎಂ. ಎಂ. ಎಲ್.ನವರು ಜಪಾನ್ ಮುಂತಾದ ದೇಶಗಳಿಗೆ ರವಾನೆ ಮಾಡುತ್ತಿದ್ದಾರೆ. ಇದರಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ದೊರೆಯುತ್ತಿದೆ. ನಮಗೆ ಈಗ ೧ ಕೋಟಿ ರೂಪಾಯಿ ಏನು ಫಾರಿನ್ ಎಕ್ಸ್‌ಚೇಂಜ್ ದೊರೆಯುತ್ತಿದೆ ಅದಕ್ಕಿಂತ ಇಲ್ಲಿ ಸ್ಪಾಂಜ್ ಐರನ್ ಫ್ಯಾಕ್ಟರಿ ಮಾಡಿ ಅದನ್ನು ಉಪಯೋಗ ಮಾಡಿಕೊಂಡರೆ ೨ ಕೋಟಿ ರೂಪಾಯಿಗಳು ದೊರೆಯುತ್ತದೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ ಇಲ್ಲಿ ಸ್ಪಾಂಜ್ ಐರನ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗಿರತಕ್ಕ ಫೆಡರಲ್ ಸ್ಟ್ರಕ್ಚರ್‌ನಲ್ಲಿ ರಾಜ್ಯಗಳಿಗೆ ಹೆಚ್ಚು ಅವಕಾಶ ಕೊಟ್ಟಿದ್ದರೆ ಅಥವಾ ಮುಂದೆ ಕೊಡುವುದಾದರೆ ನಾವೂ ಇದನ್ನೇ ಮಾಡುತ್ತಿದ್ದೋ ಅಥವಾ ಮಾಡುತ್ತಿದ್ದೆವು. ಆದರೇ ಕೇಂದ್ರದವರು ನಮ್ಮನ್ನು ನೇರವಾಗಿ ಮಾಡುವುದಕ್ಕೆ ಬಿಡುವುದಿಲ್ಲ ; ಅವರು ಮಧ್ಯೆ ಬರುತ್ತಾರೆ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಿತಿ ಏನಾಗಿದೆ ಎನ್ನುವುದು ತಮಗೆಲ್ಲರಿಗೂ ಗೊತ್ತೇ ಇದೆ. ೧೯೭೨ನೇ ಇಸವಿಯಲ್ಲಿ ಈ ಕಾರ್ಖಾನೆಯ ಅಸ್ತಿಭಾರವಾದ ಲಾಗಾಯ್ತು. ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಯತ್ನ ಮಾಡಿದಾಗ್ಯೂ ಕೇಂದ್ರದವರು ದುಡ್ಡಿಲ್ಲ, ಅದಿಲ್ಲ, ಇದಿಲ್ಲ ಎಂದು ಹೇಳುತ್ತಿದ್ದಾರೆ. ಬಹುಶಃ ಅವರಿಗೂ ಕಷ್ಟವಿರಬಹುದು. ಅಂತೂ ಪರಿಣಾಮ : ವಿಜಯನಗರ ಉಕ್ಕಿನ ಕಾರ್ಖಾನೆ ಇನ್ನೂ ಆಗಿಲ್ಲ. ಇದನ್ನೆಲ್ಲ ನಮಗೇ ಬಿಡುವುದಾದರೆ, ನೇರವಾಗಿ ಎಲ್ಲಿಂದಾದರೂ ಇವುಗಳಿಗೆ ಹಣ ತರಬಲ್ಲೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಇದಕ್ಕೇನೂ ಕೇಂದ್ರ ಸರ್ಕಾರದ ಸಹಾಯ ಬೇಕಾಗಿಲ್ಲ, ರಾಜ್ಯ ಸರ್ಕಾರದವರೇ ಮಾಡಬಹುದು.

SRI D. DEVARAJ URS :— These are all technical matters. So much so even the Sponge Iron Ore Factory also requires certain collaborations.

Non-availability of Medical Facilities to Cattle at Chikodi Taluk, Belgaum District.

673 SRI A. B. BEDGE (Sadalaga).—Will the Chief Minister be pleased to state—

(a) whether it has come to the notice of the Government that the people are put to hardship in the absence of Veterinary facilities to the cattles in several big villages having 3,000 cattle and having 6 to 7 thousand population in Chikkodi Taluk ;

(b) if so, whether Government intend to provide timely veterinary assistance to the cattles in such villages ?

SRI D. DEVARAJ URS (Chief Minister).—

(a) Yes. It is under active considera ion of the Government.

(b) The staff atta hed to the nearby villages do often visit these villages and provide treatment to the attle for general diseaies bevides inoculating the cattle against contagious diseases as a Precautionery measure free of cost.

ಶ್ರೀ ಎ. ಬಿ. ಬಿಡಗೆ.—ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಅನೇಕ ದೊಡ್ಡ ಹಳ್ಳಿಗಳಲ್ಲಿ ಮತ್ತು ಸುಮಾರು ಮೂರು ಸಾವಿರ ದನಕರುಗಳು ಇರುವಲ್ಲಿ ದನಕರುಗಳಿಗೆ ವೈದ್ಯಕೀಯ ಸಹಾಯ ಸೌಲಭ್ಯ ಇಲ್ಲದಿರುವುದರಿಂದ ಜನರು ಬಹಳ ತೊಂದರೆಗೀಡಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಡಿ. ದೇವರಾಜ ಅರಸ್.—ಗಮನಕ್ಕೆ ಬಂದಿದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ಈಗಾಗಲೇ ಏಳು ವೆಟರ್ನರಿ ಡಿಸ್ಪೆನ್ಸರೀಸ್‌ಗಳಿವೆ. ನಮ್ಮ ಲೆಕ್ಕದ ಪ್ರಕಾರ ಇನ್ನು ಮೂರು ಡಿಸ್ಪೆನ್ಸರಿಗಳನ್ನು ಚಿಕ್ಕೋಡಿ ತಾಲ್ಲೂಕಿಗೆ ಕೊಟ್ಟರೆ ಸಾಕಾಗುತ್ತದೆ. ಇದಕ್ಕೆ ಕಾರಣವಿಷ್ಟೇ : ನ್ಯಾಷನಲ್ ಕಮಿಷನ್ ಆನ್‌ಅಗ್ರಿಕಲ್ಚರ್ ಎನ್ನುವ ಸಂಸ್ಥೆಯೊಂದಿದೆ. ಅವರು ೧೯೬೦ನೇ ಇಸವಿ ವೇಳೆಗೆ ಕನಿಷ್ಟ ಒಂದು ಆಸ್ಪತ್ರೆ ೨೦ ಸಾವಿರ ಜಾನುವಾರುಗಳಿಗಿರಬೇಕು, ಆದನಂತರ ೧೯೯೯ನೇ ಇಸವಿಯ ವೇಳೆಗೆ ೧೦ ಸಾವಿರ ಜಾನುವಾರುಗಳಿಗೆ ಕನಿಷ್ಟ ಒಂದು ವೆಟರ್ನರಿ ಆಸ್ಪತ್ರೆ ಇರಬೇಕೆಂದು ಆಯೆಲ ಭಾರತ ಆಧಾರದ ಮೇಲೆ ಒಂದು ಪಾಲಿಸಿಯನ್ನು ಹಾಕಿದ್ದಾರೆ. ಕರ್ನಾಟಕದ ಸರಾಸರಿ ತೆಗೆದುಕೊಂಡರೆ, ಈಗಾಗಲೇ ಪ್ರತಿ ೧೧ ಸಾವಿರ ಜಾನುವಾರುಗಳಿಗೆ ಒಂದೊಂದು ವೆಟರ್ನರಿ ಆಸ್ಪತ್ರೆ ಇದೆ. ನ್ಯಾಷನಲ್ ಕಮಿಷನ್ ಆನ್ ಅಗ್ರಿಕಲ್ಚರ್ ಸಂಸ್ಥೆಯವರು ಹಾಕಿರುವ ಪರಿಮಿತಿಯ ಲೆಕ್ಕದಲ್ಲಿ ೧೯೯೯ ನೇ ಇಸವಿಯನ್ನು ನಾವು ಈಗಾಗಲೇ ತಲುಪಿದ್ದೇವೆ. ಆದರೆ, ಆಸ್ಪತ್ರೆಗಳು ಸಮಸಾಂತರವಾಗಿ ಹಂಚಿಕೆಯಾಗಿಲ್ಲವೆನ್ನುವುದನ್ನು ನಾನು ಒಪ್ಪುತ್ತೇನೆ. ಒಂದೊಂದು ಕಡೆ ಹೆಚ್ಚಿಗೆ ಆಸ್ಪತ್ರೆಗಳಿವೆ. ಯಾರೋ ಮಂತ್ರಿಗಳು ಹೋದಾಗ, ಎಲ್ಲೋ ಕೇಳಿದಾಗ, ಮಂತ್ರಿಗಳು ತಮಗೆ ಇಚ್ಛೆ ಬಂದಹಾಗೆ ಕೊಟ್ಟುಕೊಂಡು ಹೋಗಿರುವುದನ್ನು ನಾವು ಹಿಂದಿನಿಂದಲೂ ನೋಡಿದ್ದೇವೆ. ನಾನೀಗ ಅದನ್ನು ವಾಸ್ತವ ದೃಷ್ಟಿಯಿಂದ ನೋಡಿ. ಒಂದು ಕಡೆ ೧೫ ಆಸ್ಪತ್ರೆ ಇದ್ದರೆ ಇನ್ನೊಂದು ಕಡೆ ಮೂರೂ ಇರಂವುದಿಲ್ಲ–ಹೀಗಾಗಬಾರದೆನ್ನುವ ದೃಷ್ಟಿಯಿಂದ ಒಟ್ಟಾರೆ ಸರ್ವೆ ಮಾಡಿ ಆದರ ಪ್ರಕಾರ ಕೊಡೋಣ. ಅದು ಬಿಟ್ಟು ಅರ್ಜಿ ಕೊಟ್ಟರೆ, ಹೂವಿನ ಹಾರ ಹಾಕಿದರೆ, ಜ್ಯಾಂಡ ಭಾರಿಸಿದರೆ ಆಸ್ಪತ್ರೆ ಕೊಡುತ್ತೇವೆ ಎಂದು ಹೇಳಿಕೊಂಡು ಹೋಗುವುದು ಬೇಡ. ಎಲ್ಲೆಲ್ಲಿಗೆ ಎಷ್ಟೆಷ್ಟು ಆಸ್ಪತ್ರೆಗಳು ಬೇಕೆಂದು ಇಲಾಖೆ ಇತ್ಯರ್ಥ ಮಾಡಬೇಕಾಗುತ್ತದೆ. ಈಗ ಚಿಕ್ಕೋಡಿ ತಾಲ್ಲೂಕಿಗೆ ಇನ್ನು ಮೂರು ಆಸ್ಪತ್ರೆಗಳನ್ನು ಕೊಟ್ಟರೆ, ಆ ತಾಲ್ಲೂಕು ಒಂದು ಸ್ಯಾಟ್ಯೂರೇಡ್ ಗೆ ಬರುತ್ತದೆ. ಅದನ್ನು ಕೊಡಬೇಕು. ಇನ್ನು ಕೆಲವು ಕಡೆಗಳಲ್ಲಿ ಹೆಚ್ಚಿಗೆ ಆಸ್ಪತ್ರೆಗಳಿವೆ. ಕೆಲವು ಕಡೆ ಇಲ್ಲವೇ ಇಲ್ಲ. ಹೆಚ್ಚಿಗೆ ಹಾಕಿರುವವನ್ನು ಕೀಳುವುದಕ್ಕಾಗುವುದಿಲ್ಲ. ಇಲ್ಲದೆ ಇರುವ ಕಡೆಗೆ ಕೊಡಬೇಕು, ಅಷ್ಟೇ. ಈಗ ೭೫ ಆಸ್ಪತ್ರೆಗಳನ್ನು ಹೊಸದಾಗಿ ಕೊಡಬೇಕೆಂದು ಮಂಜೂರು ಮಾಡಿದ್ದೇನೆ. ಆದರೆ, ಅವುಗಳನ್ನು ಯಾವ ಭಾಗಕ್ಕೆ ಕೊಡಬೇಕೆನ್ನುವುದನ್ನೂ ತೀರ್ಮಾನ ಮಾಡಬೇಕಾಗಿದೆ. ಈಗ ಮಂಜೂರು ಮಾಡಿರುವ ಆಸ್ಪತ್ರೆಗಳನ್ನು ಈ ವರ್ಷವೇ ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣ ; ನಮ್ಮಲ್ಲಿ ಹಾಲಿ ೨೦೦ ವೆಟರ್ನರಿ ವೈದ್ಯರ ಹುದ್ದೆಗಳು. ಖಾಲಿ ಇರುವುದರ ಜೊತೆಗೆ ೧೫೦ ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್ ಮತ್ತು ೪೫೦ ಕಾಂಪೌಂಡರ್ಸ್ ಬೇಕಾಗಿದ್ದಾರೆ. ಇದು ವಾಸ್ತವ ಹಾಗೂ ವಿಷಾದಕರ ವಿಷಯ. ಇದರ ಬಗ್ಗೆ ನಾನೂ ತೃಪ್ತಿ ಹೊಂದಿಲ್ಲ. ಏನೋ ಹೀಗೇ ಇದು ಬಂದುಬಿಟ್ಟಿದೆ. ಮಾನ್ಯ ಸದಸ್ಯರು ಇದನ್ನು ನನ್ನ ಗಮನಕ್ಕೆ ತಂದಂದು ಒಳ್ಳೆಯದಾಯಿತು. ಮೊನ್ನೆ ತಾನೆ ನಾನು ೬೦೦ ಜನ ಕಾಂಪೌಂಡರ್ಸ್ ಅಥವಾ ಲೈವ್ ಸ್ಟಾಕ್ ಮ್ಯಾನ್‌ಗಳಿಗೆ ಆರು ತಿಂಗಳ ತರಬೇತಿ ನೀಡುವುದಕ್ಕಾಗಿ ಆರು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇನೆ. ಈಗ ವೆಟರ್ನರಿ ವೈದ್ಯರ ಅಭಾವವಿದೆ. ಈಗ ಓದುತ್ತಿರುವವರು ಅಧ್ಯಯನ ಮಾಡಿ ಬರಬೇಕಾದರೆ ಇನ್ನೂ ಒಂದು ವರ್ಷ ಬೇಕಾಗುತ್ತದೆ. ಬೆಳಗಲು ಕಾಲೇಜಿನಲ್ಲಿ ಈ ಕೋರ್ಸಿಗೆ ಹೆಚ್ಚಿಗೆ ಅಡ್ಮಿಷನ್ ಮಾಡಿಕೊಳ್ಳಲಿಲ್ಲ. ಇನ್ನು ಮುಂದೆ ಹೆಚ್ಚಿಗೆ ಜನರನ್ನು ಅಡ್ಮಿಷನ್ ಮಾಡಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ಹಾಗಾದರೆ ಕಾಲೇಜಿಗೆ ಹೊಂದಿಕೊಂಡಂತೆ ಆಸ್ಪತ್ರೆ ಮತ್ತು ಕ್ಲಿನಿಕಲ್ ಫೆಸಿಲಿಟಿ ಬೇಕಾಗಿದೆ ಎಂದು ಅವರು ಬೇಳುತ್ತಿದ್ದಾರೆ. ಈಗ ಮಲ್ಲೇಶ್ವರದಲ್ಲಿರುವ ಆಸ್ಪತ್ರೆಯನ್ನು ನೀವೇ ತೆಗೆದುಕೊಳ್ಳಿ, ಇನ್ನು ಏನು ಸೌಕರ್ಯ ಬೇಕೋ ಕೊಡಿಸೋಣ ಎಂದು ಹೇಳಿದ್ದೇವೆ. There are various problems. Therefore, I wish that we could do some thing for the establishment of hospitals within a couple of years. I am sorry I am not able ot do that work immediately due to so many factors which I have just now explained to the House. ಸುಮ್ಮನೆ ಆಸ್ಪತ್ರೆ ಕೊಟ್ಟರೆ ಏನು ಪ್ರಯೋಜನ? ವೈದ್ಯರಿಲ್ಲ ಎಂದು ಅರ್ಜಿ ಬರೆದಿದ್ದೇ ಬರೆದಿದ್ದು ಆಮೇಲೆ, ಇಷ್ಟು ಮಾತ್ರ ಭರವಸೆ ಕೊಡುತ್ತೇನೆ ; ಚಿಕ್ಕೋಡಿ

ತಾಲ್ಲೂಕಾಗಲಿ ಅಥವಾ ಇನ್ನಾವುದೇ ತಾಲ್ಲೂಕಾಗಲೀ, ಪ್ರತಿ ಹತ್ತು ಸಾವಿರ ಜಾನುವಾರಗಳಿಗೊಂದರಂತೆ ವೆಟರ್ನರಿ ಡಿಸ್ಪೆನ್ಸರಿಗಳನ್ನು ಕೊಡಲು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ ; ಈ ಬಗ್ಗೆ ಯೋಜನೆ ಹಾಕಿಕೊಂಡು ಪೈಕ್ಯರು ಸಿಕ್ಕಿದ ಹಾಗೆಲ್ಲ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತಾ ಹೋಗುತ್ತೇವೆ.

ಶ್ರೀ ಎ. ಬಿ. ಪಡಗಿ.— ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಸಂತೋಷ ಮತ್ತು ಸಮಾಧಾನ ಕರವೂ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ರೋಗರುಜಿನಗಳಿಗೊಳಗಾದ ಜಾನುವಾರುಗಳನ್ನು ತತ್ಕಾಲಿಕವಾಗಿ ಉಪಚರಿಸಲಸುಕೂಲವಾಗುವಂತೆ ಕಾಂಪೌಂಡರ್ಸ್ ಮತ್ತು ಲೈವ್ ಸ್ಟಾಕ್ ಮನ್‌ಗಳಿಗೆ ಆರು ತಿಂಗಳು ತರಬೇತಿಯನ್ನು ನೀಡಿ ಕಳುಹಿಸಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್. —ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ತರಬೇತಾಗದವರನ್ನು ಕಳುಹಿಸಿದರೆ ಇರುವ ಜಾನುವಾರಗಳನ್ನೂ ಸಾಯಿಸುತ್ತಾರೆ, ಅಷ್ಟೆ;

2-00 P M.

Providing Electricity in Gulbarga Taluk

841 SRI S. F. BHAIRY (Shahabad)—

SRI B. V. KAKKILAYA (Vittal)—

SRI PAMPAPATAI (Davanagere)—

Will the Minister of State for Information and Youth Services be pleased to state.—

(a) how many villages of Farutabad Hobli of Gulbarga taluk are electrified ;

(b) how many villages of the said Hobli are not electrified

(c) when will the remaining villages be electrified?

SRI K. H. SRINIVAS (Minister of State for Information and Youth Services).—

(a) 8.

(b) 17.

(c) As and when they are included in the village Electrification Programmes.

ಶ್ರೀ ಎಸ್. ಎಫ್. ಬೈರಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಗುಲ್ಬರ್ಗಾ ತಾಲ್ಲೂಕ್ಕಿನ ೮ ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡಿದ್ದೇವೆ. ೧೭ ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡಿಲ್ಲವೆಂದು ಹೇಳಿರುತ್ತಾರೆ. ೧೭ ಹಳ್ಳಿಗೆ ಇದುವರೆವಿಗೂ ಏತಕ್ಕೆ ವಿದ್ಯುತ್ತೀಕರಣ ಮಾಡಿಲ್ಲ, ಮತ್ತು ಇನ್ನು ಎಷ್ಟು ತಿಂಗಳಲ್ಲಿ ವಿದ್ಯುತ್ತೀಕರಣ ಮಾಡುತ್ತೀರಿ, ವಿದ್ಯುತ್ತೀಕರಣ ಮಾಡಬೇಕೆಂದು ಮಾಡಿರತಕ್ಕ ಲಿಸ್ಟ್‌ನಲ್ಲಿ ಈ ೧೭ ಹಳ್ಳಿಗಳೂ ಸೇರಿರುತ್ತವೆಯೇ ತಿಳಿಸಬೇಕು.

†ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿತಕ್ಕಂಥ ಎಲ್ಲ ಹಳ್ಳಿಗಳಿಗೂ ವಿದ್ಯುತ್ ಪೂರೈಕೆ ಮಾಡಬೇಕೆಂದು ಸರ್ಕಾರದ ನೀತಿಯಾಗಿರುತ್ತದೆ. ಈ ನೀತಿಗೆ ಬದ್ಧವಾಗಿ ಈ ವರ್ಷ ಹೊಸ ಹೊಸ ಹಳ್ಳಿಗಳನ್ನು ಈ ಕಾರ್ಯಕ್ರಮಕ್ಕೆ ಒಳಪಡಿಸಿದ್ದೇವೆ. ಕೆಲವೊಂದು ತೊಂದರೆಯಿಂದ ಅಂದರೆ ಸಾಕಷ್ಟು ಸಲಕರಣೆಗಳ ತೊಂದರೆಯಿಂದಾಗಿ ಗುಲ್ಬರ್ಗಾ ತಾಲ್ಲೂಕಿನ ೧೭ ಹಳ್ಳಿಗಳಿಗೆ ವಿದ್ಯುತ್